Within your powers, I don't know how you can pull them up-either by persuasion or by some other action. If necessary, we will have to amend the rules.

(Minister for Municipal Administration entered the house)

ಶ್ರೀ ಪಿ. ರಾಮದೇವ್.—ಅಧ್ಯಕ್ಷರೆ, ಇನ್ನು ಮುಂದೆ ವಾರಕ್ಕೆ ೫ ದಿವಸ ಕಾರ್ಯ ಕಲಾಪಗಳನ್ನು ನಡೆಸಿ ಎರಡು ದಿವಸ ರಜೆ ಕೊಡುವುದು ಒಳ್ಳೆಯದು ಏಕೆಂದರೆ ಅನೇಕ ಜನ ಸದಸ್ಯರು ಮಂತ್ರಿಗಳು ತಮ್ಮ ಗ್ರಾಮಕ್ಕೆ ಹೋಗಿಬರುವುದು ಇರುತ್ತದೆ. ಈಗ ಶನಿವಾರಕ್ಕೆ ಲಕ್ಷಾಂತರ ರೂಪಾಯಿ ಟಿ.ಎ. ಮತ್ತು ಡಿ.ಎ. ಕೊಡುತ್ತೀರಾ ಇಲ್ಲಿ ಸದಸ್ಯರು ಇರುವುದಿಲ್ಲ, ಮಂತ್ರಿಗಳು ಇರುವುದಿಲ್ಲ ಆದ್ದರಿಂದ ವಾರಕ್ಕೆ ೫ ದಿವಸ ಇಟ್ಟುಕೊಂಡರೆ ಅವರಿಗೂ ತೊಂದರೆ ತಪ್ಪುತ್ತದೆ, ನಮಗೂ ತೊಂದರೆ ತಪ್ಪುತ್ತದೆ.

ಶ್ರೀ ಹೆಚ್.ಸಿ ಶ್ರೀಕಂಠಯ್ಯ.—ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆಯಲ್ಲಿ ಆಗಲ್ಲಿ, ಗಮನ ಸೆಳೆವ ಸೂಚನೆಯ ವೇಳೆಯಲ್ಲಿ ಆಗಲಿ, ನಾನು ಯಾವ ದಿವಸವು ಕೂಡ ಈ ಸಭೆಗೆ ನಿಧಾನವಾಗಿ ಬಂದಿಲ್ಲ ಇವತ್ತು ಪ್ರಶ್ನೋತ್ತರ ವೇಳೆ ೧೦ ಗಂಟೆಗೆ ಮುಗಿಯುತ್ತದೆಂದು, ಒಂಬತ್ತು ಮುಕ್ಕಾಲು ಗಂಟೆಗೆ ಬಂದಿದ್ದೇನೆ.

ಅಧ್ಯಕ್ಷರು :—ಪ್ರಶ್ನೋತ್ತರುಗಳು ಎಷ್ಟು ವೇಳೆಯಲ್ಲಿ ಮುಗಿಯುತ್ತದೆಂದು ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಇವುತ್ತು ಪ್ರಶ್ನೆಗಳನ್ನು ಹಾಕಿದ ಸದಸ್ಯರು ಇಲ್ಲದೇ ಪ್ರಶ್ನೆಗಳು ಮುಗಿದು ಹೋಗಿವೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ತಾವು ತಪ್ಪು ತಿಳಿದುಕೊಂಡಿದ್ದೀರಿ. ಬಹಳ ಜನ ಮಂತ್ರಿಗಳೂ ಕೂಡ ಗೈರುಹಾಜರಿದ್ದಾರೆ.

ಅಧ್ಯಕ್ಷರು :—ತಮ್ಮ ಇಲಾಖೆಗೆ ಸೇರಿದ್ದು ಎರಡು ಕಾಲ್ ಅಟೆನ್‌ಷನ್‌ಗಳು ಇವೆ. ತಾವು ಅಜೆಂಡಾ ನೋಡಿರುತ್ತೀರೆಂದು ನಮ್ಮ ಊಹೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ನಾನು ಕಾಲ್ ಅಟೆನ್‌ಷನ್ ವೇಳೆಗೆ ಬಂದಿದ್ದೇನೆ. ಅದಕ್ಕೆ ಹೊತ್ತಾಗಿ ಬಂದಿಲ್ಲ.

MR. SPEAKER.—Because of your absence, the Call Attention could not be taken up in time. The Minister for Parliamentary Affairs has assured that there would be no room for such things hereafter.

CALLING ATTENTION TO MATTERS OF URGENT PUBLIC IMPORTANCE

(*i*) *re : Scarcity of drinking water at Mudhagal Town.*

ಶ್ರೀ ಎಂ. ಗಂಗಣ್ಣ ಭೀಮಪ್ಪ (ಕುಷ್ಟಗಿ).—ಸ್ವಾಮಿ, ರಾಯಚೂರು ಜಿಲ್ಲೆಯ, ಲಿಂಗಸುಗೂರು ತಾಲ್ಲೂಕಿನ ಮುದಗಲ ಟೌನಿನಲ್ಲಿ ಕುಡಿಯುವ ನೀರಿನ ಅಭಾವದ ವಿಚಾರವಾಗಿ ಮಾನ್ಯ ಪೌರಾಡಳಿತ ಸಚಿವರ ಗಮನವನ್ನು ಸೆಳೆಯುತ್ತೇನೆ.

SRI H.C. SRIKANTAIAH (Minister for Municipal Administration).—I wish to make the following statement:

Piped Water Supply Scheme to Mudgal Town in Lingasugur Taluk of Raichur District was sanctioned at an estimated cost of Rs, 5.00 lakhs in 1972. The work has been taken up for execution and is almost complete. The Town is divided into 3 parts viz.. (1) Central

Portion, (2) Upparpet and (3) Puranapet Areas. As per the sanctioned plans and estimates, each zone has a separate source from which water is to be lifted and then distributed. The works of source rising mains, elevated reservoir of 50,000 gallons capacity and distribution system with public stand-posts and the erection of pumpset for Central portion have been completed in all respects and water is being supplied to this Central portion at the rate of 20,000 gallons per day for the population of 8000 which is inadequate at present due to insufficient yield in the open dug well.

In all other two areas viz., Upperpet and Puranpet all the works such as source, pump house, Rising main, Ground level Service Reservoir distribution system with public Stand Posts have been completed. The work to be done is that of errection of pumpsets for these two areas. The pumpsets have already been procured and conveyed to site. Agency for errection of pumpsets has been fixed and the work will be completed within a period of fortnight or 20 days and water supplied to these areas.

The Expenditure on the above works to end of March 1979 is Rs. 7.55,004/as against the sanctioned amount of Rs. 5,00,000/-. The extra expenditure is due to change of source, change of type of reservoir, increase in length of rising main in Central Portion and modification of storage stand post system to that of Ground Level service reservoir with distribution system and public stand posts in the areas of Upperpet and Puranpet.

The Government have sanctioned Rs 1.00 lakh under Development grants to the Municipality for water Supply and Development works in G.O, No. HUD 102 MNM 79 dated 28-3-1979. The Deputy Commissioner has been instructed to place this amount at the disposal of the Karnataka Urban Water Supply and Drainage Board for taking further action. The Board havs already prepared estimates for sinking two more borewells as, during summer months the yield in the existing wells dwindle down and scarcity is caused. This will be taken up out of Rs. 1,00 lakh grant. When these two borewells are completed, there will not be scarcity of water during summer months.

ಶ್ರೀ ಎಂ. ಗಂಗಣ್ಣ ಭೀಮಪ್ಪ.—ಸ್ವಾಮಿ, ತಮ್ಮ ಉತ್ತರದಲ್ಲಿ ವರ್ಕ್ ಈಸ್ ಕಂಪ್ಲೀಟೆಡ್ ಎಂದು ಹೇಳಿದ್ದೀರಿ. ಆಲ್ಲಿ ಇನ್ನೂ ವರ್ಕ್ ಕಂಪ್ಲೀಟ್ ಆಗಿಲ್ಲ. ನಾನು ಆ ಕ್ಷೇತ್ರದ ಶಾಸಕನಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇದು ಏನಾಗಿದೆ ಅಂದರೆ ಹೆಸರು ಹಾಲಪ್ಪ ಕುಡಿಯುವುದಕ್ಕೆ ಮಜ್ಜಿಗೆ ಇಲ್ಲ ಅನ್ನುವ ತರಹ ಆಗಿದೆ. ಹಿಂದೆ ನಮ್ಮ ಪ್ರದೇಶ ವಿಜಯನಗರ ಸಾಮ್ರಾಜ್ಯ, ಅಲ್ಲಿ ಕೋಟೆ ಹೇಗೆ ಕಾಣುತ್ತಿತ್ತು. ಈಗ ಏನಾಗಿದೆ ಅಂದರೆ ವಾಟರ್ ಟೋರ್ಡ್‌ನವರು ಕಟ್ಟಿದಂತಹ ಒಂದು ಟ್ಯಾಂಕು ನೋಡಲಿಕ್ಕೆ ಸಿಕ್ಕುತ್ತದೆ. ಆದರೆ ಅದರಲ್ಲಿ ಒಂದು ಹನಿ ಕೂಡ ನೀರಿಲ್ಲ. ಇನ್ನು ಇದರ ಬಗ್ಗೆ ಪಬ್ಲಿಕ್ ಕಾಂಟ್ರಿಬ್ಯೂಷನ್ ಕಟ್ಟಿಲ್ಲ ಎಂದು ಹೇಳಿದರು, ಇದನ್ನು ೧೯೭೧ರಲ್ಲಿಯೇ ಕಟ್ಟಿದ್ದೇವೆ. ೧೯೭೨ರಲ್ಲಿಯೇ ೫ ಲಕ್ಷ ರೂಪಾಯಿ ಯೋಜನೆ ಸಾಂಕ್ಷನ್ ಮಾಡಿದ್ದಾರೆ. ಈಗ ಏಳೂವರೆ ಲಕ್ಷ ರೂಪಾಯಿ ಖರ್ಚಾಗಿದೆ ಎಂದು

ಹೇಳುತ್ತಿದ್ದಾರೆ. ಈಗ ಎರಡೂವರೆ ಲಕ್ಷ ರೂಪಾಯಿ ಹೆಚ್ಚು ಖರ್ಚಾಗಿರುವುದಕ್ಕೆ ಪುರಸಭೆಯವರಿಂದ ಅಪ್ರೂವಲ್ ತೆಗೆದುಕೊಂಡಿಲ್ಲ, ಜನಗಳಿಂದ ಅಪ್ರೂವಲ್ ತೆಗೆದುಕೊಂಡಿಲ್ಲ. ಏತಕ್ಕೆ ಹೆಚ್ಚು ಹಣ ಖರ್ಚಾಯಿತು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮೊದಲು ೫ ಲಕ್ಷ ಸಾಂಕ್ಷನ್ ಆಯಿತು. ಈಗ ಎರಡೂವರೆ ಲಕ್ಷ ರೂಪಾಯಿ ಜಾಸ್ತಿಯಾಗಿದೆ ಅಂದರೆ, ಇದರ ಬಗ್ಗೆ ಯಾರನ್ನೂ ಕೇಳಬೇಕಾಗಿಲ್ಲ. ಇದರ ಬಗ್ಗೆ ಈಗಾಗಲೆ ಬೇಕಾದಷ್ಟು ಕಾರಣಗಳನ್ನು ಹೇಳಿದ್ದೇನೆ. ಈಗ ಏಳೂವರೆ ಲಕ್ಷ ರೂಪಾಯಿ ಖರ್ಚು ಆಗಿದ್ದರೂ ನೀರಿನ ಅಭಾವ ಇದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇನ್ನು ಒಂದು ತಿಂಗಳೊಳಗಾಗಿ ಕೆಲಸ ಪೂರೈಸಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಗಂಗಣ್ಣ ಭೀವಪ್ಪ.—ಸ್ವಾಮಿ, ಇದು ನನ್ನ ಸ್ವಂತ ಗ್ರಾಮ, ನಾನು ಊರಿನಲ್ಲಿ ಹೋದರೆ ಜನರು ನನ್ನನ್ನು ಸುಮ್ಮನೆ ಬಿಡುವುದಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಗತಕಾಲದ ವೈಭವ ವಿಜಯನಗರ ಸಾಮ್ರಾಜ್ಯವನ್ನು ನೆನಸಿಕೊಳ್ಳುತ್ತಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ನೀವು ಅವರಿಗೆ ಅನುಕೂಲ ಮಾಡಿಕೊಡುವವರೆಗೂ ಅವರು ಅವರ ಊರಿಗೆ ಹೋಗುವ ಆಗಿಲ್ಲ. ಆದ್ದರಿಂದ ಮಾನ್ಯ ಸದಸ್ಯರನ್ನು ತಮ್ಮ ಮನೆಯಲ್ಲಿ ಇಟ್ಟು ಕೊಳ್ಳಿ. ತಾವು ನೀರಿನ ವ್ಯವಸ್ಥೆ ಸರಿಪಡಿಸುವವರೆಗೂ ಅವರು ಊರಿಗೆ ಹೋಗುವಂತಿಲ್ಲ.

ಶ್ರೀ ಎಂ.ಗಂಗಣ್ಣ ಭೀವಪ್ಪ.—ಸ್ವಾಮಿ, ಇನ್ನು ಅಲ್ಲಿಗೆ ಪಂಪ್‌ಸೆಟ್ಟು ಬಂದಿಲ್ಲ.

MR. SPEAKER.—The Hon'ble Minister will give direction don't worry.

(ii) Re. Unduer delay in extinguishing five at Gadag.

ಶ್ರೀ ಎಂ.ಜಿ. ಜರತಾರಗರ್.—ಸ್ವಾಮಿ, ಗದಗಿನ ಜವಳಿ ಬಡಾವಣೆಯ ಕಿರಾಣಿ ಅಂಗಡಿಯೊಂದರಲ್ಲಿ ಸಂಭವಿಸಿದ ಬೆಂಕಿಯನ್ನು ಆರಿಸುವಲ್ಲಿ ಅಗ್ನಿಶಾಮಕ ದಳದವರ ಅತಿ ವಿಳಂಬದಿಂದಾಗಿ ಉದ್ಭವಿಸಿದ ಪರಿಸ್ಥಿತಿಯ ವಿಚಾರದ ಬಗ್ಗೆ ಮಾನ್ಯ ಪೌರಾಡಳಿತ ಸಚಿವರ ಗಮನವನ್ನು ಸೆಳೆಯುತ್ತೇನೆ.

SRI H.C. SRIKANTAIAH (Minister for Municipal Administration)—I wish to make the following statement:

On 30-11-1978, (midnight) a fire accident took place at Javal area, of Gadag in which a shop belonging to one Shri Salunke was affected by the fire. On receipt of a phone call, the fire fighter belonging to Gadag-Betgeri Municipality was sent with the staff to the spot to control the fire. The fire brigade unit brought the fire under control.

Since the fire was promptly brought under control by the Municiple Fire Fighters the news item that the Municipality took action after the fire was extinguished is far from the truth and base less.

ಶ್ರೀ ಎಂ.ಜಿ. ಜರತಾರಗರ್.—ಸ್ವಾಮಿ, ತಮ್ಮ ಉತ್ತರದಲ್ಲಿ ನೀರು ಸರಬರಾಜು ಮಾಡಿದಾರೆಂದು ಹೇಳಿದ್ದೀರಿ. ಅಲ್ಲಿ ಫೈರ್‌ಬ್ರಿಗೇಡ್ ಯಾವ ರೀತಿಯಿಂದಲೂ ಕೆಲಸ ಮಾಡಿಲ್ಲ. ಅಲ್ಲಿ ಸತ್ಯಕ್ಕೆ ದೂರವಾಗಿ ಹೇಳುತ್ತಿದ್ದಾರೆ. ರಾತ್ರಿ ೧೨ ಗಂಟೆಯ ನಂತರ ಯಾವುದೇ ರೀತಿಯಿಂದ ಅಗ್ನಿಶಾಮಕ ದಳದವರು ಕೆಲಸ ಮಾಡಿಲ್ಲ. ಅಲ್ಲಿ ಮೂರು ವಾಹನಗಳು ಇದ್ದು, ಅದರಲ್ಲಿ ಎರಡು ಕೆಟ್ಟಿದ್ದು ಒಂದು ವಾಹನ ಬಂದಿದೆ, ಆದರೆ ಅಲ್ಲಿಗೆ ಬಂದಿದ್ದಂತಹ ವಾಹನದಲ್ಲಿ ನೀರು ಇರಲಿಲ್ಲ ಎಂದು ಜನರು ಬೇಜಾರು ಮಾಡಿಕೊಂಡಿದ್ದಾರೆ. ಅಲ್ಲಿ ಬಡ ಜನರ ಮನೆಗಳು ಸುಟ್ಟಿವೆ. ಅಗ್ನಿಶಾಮಕ ದಳದವರಂ ಅಲ್ಲಿ ಸರಿಯಾಗಿ ಕೆಲಸ ಮಾಡಿಲ್ಲ. ಆದುದರಿಂದ ಇನ್ನು ಮುಂದೆ ಸರಿಯಾಗಿ ನೋಡಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?